ಎಮ್.ವಿ.ಸಿ. ನಂ.212/2021
ಆರ್.ಡಬ್ಲ್ಯೂ.1

ದಿನಾಂಕಃ 04.03.2023
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಮುಖ್ಯ ವಿಚಾರಣೆ ಎದುರುದಾರರ ಪರವಾಗಿ ಶ್ರೀ. ಪಿ.ಎನ್.ಜೆ., ವಕೀಲರಿಂದ ಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ಮೋಟರ್ ಸೈಕಲ್ ನಂಬರ್ ಕೆಎ-33/ಡಬ್ಲ್ಯ. 0205 ಇದರ ನೋಟರಿ ಅಟೇಸ್ಟೇಡ್ ಆರ್. ಸಿ ನಿಪಿ 1 ಎಂದು, ಇನ್ಸೂರೆನ್ಸ್ ಪಾಲಿಸಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು, ಸಂಗಪ್ಪ ಇವರ ಡಿ.ಎಲ್ ನ ನೋಟರಿ ಅಟೇಸ್ಟೇಡ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ರುಜವಾತು ಪಡಿಸುವ ಷರತ್ತುನೊಂದಿಗೆ ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರ ಪರ ಶ್ರೀ. ಸಿ.ಆರ್., ವಕೀಲರಿಂದ -**

3. ಸದರಿ ಅಪಘಾತವು ಮೋಟರ್ ಸೈಕಲ್ ಸವಾರನ ಸಂಗಪ್ಪ ಇವರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಪರಿಹಾರ ಧನ ಕೊಡುವ ಭಾದ್ಯತೆಯಿಂದ ತಪ್ಪಿಸಿಕೊಳ್ಳಲು ಸದರಿ ಅಪಘಾತ ಸಂಗಪ್ಪ ಇವರ ತಪ್ಪಿನಿಂದ ಆಗಿರುವುದಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಎದುರುದಾರರ ಪರ ಶ್ರೀ. ಎಸ್.ವಿ.ಪಿ.,ವಕೀಲರಿಂದ -**

4. ಅಪಘಾತದಲ್ಲಿ ಒಳಗೊಂಡ ಮೋಟರ್ ಸೈಕಲ್ ನಂಬರ್ ಕೆಎ-33/ಡಬ್ಲೂ-0205 ಇದರ ಮಾಲೀಕ ನಾನೇ ಇರುತ್ತೇನೆಂದರೆ ಸರಿ. ಸಂಗಪ್ಪ ತಂದೆ ತಾರನಾಥ ಇವರು ನಮ್ಮ ತಾಂಡಾದ ವ್ಯಕ್ತಿಯಾಗಿದ್ದು, ಸಂಬಂದದಲ್ಲಿ ಅಣ್ಣತಮ್ಮನಾಗಬೇಕು. ಅರ್ಜಿದಾರ ನನ್ನ ಮಗ ಅಂದರೆ ಸರಿ. ಅರ್ಜಿದಾರ ಪರಿಹಾರ ಧನ ಪಡೆದುಕೊಳ್ಳಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.ಸದರಿ ಅಪಘಾತದ ಬಗ್ಗೆ ನಾನೇ ದೂರು ಸಲ್ಲಿಸಿರುತ್ತೇನೆಂದರೆ ಸರಿ. ಅಪಘಾತವಾದ 6 ದಿನಗಳ ನಂತರ ನಾನು ದೂರನ್ನು ನೀಡಿರುತ್ತೇನೆ. ಅಪಘಾತವಾದ ನಂತರ ಅರ್ಜಿದಾರರನ್ನು ಸರಕಾರಿ ಆಸ್ಪತ್ರೆಗೆ ಶಹಾಪೂರಗೆ ಕರೆದುಕೊಂಡು ಹೋಗಲಾಗಿತ್ತು ವಿಷಯ ಗೊತ್ತಾಗಿ ನಾನು ಸಹ ನಂತರದಲ್ಲಿ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ರಾತ್ರಿ 10-30 ಗಂಟೆಯ ಸುಮಾರಿಗೆ ಅರ್ಜಿದಾರನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು, ನಾನು ಅಂದಾಜು 10-45 ಅಥವಾ 11 ಗಂಟೆಗೆ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ವೈದ್ಯರು ಅಪಘಾತದ ಬಗ್ಗೆ ಮಾಹಿತಿ ನನಗೆ ಕೇಳಿರಲಿಲ್ಲ. ಆದರೆ ಒಬ್ಬ

ವಿಶ್ವನಾಥ ತಂದೆ ರಾಮು ಪವಾರ್ ಇವರಿಗೆ ಕೇಳಿರುತ್ತಾರೆ. ಅಪಘಾತದ ನಂತರ ಗಾಯಾಳುಗಿಗೆ ಆಸ್ಪತ್ರೆಗೆ ತೋರಿಸಲು ತೆಗೆದುಕೊಂಡು ಹೋದಾಗ ಆ ಬಗ್ಗೆ ಸಂಬಂಧಪಟ್ಟ ದಾಖಲೆಗಳು ಆಸ್ಪತ್ರೆಯಲ್ಲಿ ಇರುತ್ತವೆ ಎಂದರೆ ಸರಿ. ಈ ಅರ್ಜಿಯಲ್ಲಿ ಹೇಳಿರುವಂತೆ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಅಪಘಾತ ಸೃಷ್ಟಿಮಾಡಿ ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.